ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ ,ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ:ಇ-ಆಡಳಿತ. ವರ್ಗಾವಣೆ /07/2020-21 ದಿ: 08/07/2021 **ಅತೀತುರ್ತು**

**-: ಸುತ್ತೋಲೆ :-**

ವಿಷಯ : ಶಿಕ್ಷಕರ ವರ್ಗಾವಣೆ ತಂತ್ರಾಂಶದಲ್ಲಿ ಮಂಜೂರಾದ, ಕರ್ತವ್ಯ ನಿರ್ವಹಿಸುತ್ತಿರುವ ಮತ್ತು ಖಾಲಿ ಹುದ್ದೆಗಳನ್ನು ಇಂದೀಕರಿಸುವ ಕುರಿತು.

ಉಲ್ಲೇಖ:1) ಈ ಕಛೇರಿ ಅಧಿಕೃತ ಜ್ಞಾಪನಾ ಸಮ ಸಂಖ್ಯೆ ದಿನಾಂಕ 11/11/2020 ಮತ್ತು 14/12/2020 ,12 / 01 /2021,17-03-2021

2) ಶಿಕ್ಷಕರ ವರ್ಗಾವಣೆ ಅಧಿಸೂಚನೆ ಸಂಖ್ಯೆ : ಶೀ.ವ.ಕೋ.ಶ.ಸಾ.ವ/01 /2020-21 ದಿನಾಂಕ 29/06/2021 ಮತ್ತು 30/07/2021

3) ಈ ಕಛೇರಿಯ ಪತ್ರದ ಸಮ ಸಂಖ್ಯೆ: ದಿನಾಂಕ:05.07.2021

------------

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲಾ ಶಿಕ್ಷಕರು, ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಗಳು ಹಾಗು ವಿವಿಧ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ, ಎಲ್ಲಾ ಬೋಧಕ ವೃಂದದ ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿ ಹುದ್ದೆಗಳ ಮಾಹಿತಿಯನ್ನು ವರ್ಗಾವಣೆ ತಂತ್ರಾಂಶ **(http://sts.karnataka.gov.in/TEACHERTRANSFER2020**) ದಲ್ಲಿ ಇಂದೀಕರಿಸಲಾಗಿತ್ತು, ಆದರೆ ಬಡ್ತಿ, ಪದೋನ್ನತಿ, ಅಕಾಲಿಕ ಮರಣ, ರಾಜೀನಾಮೆ, ನಿವೃತಿ ಇತ್ಯಾದಿ, ಸಕಾರಣಗಳಿಂದ EEDS ತಂತ್ರಾಂಶದಲ್ಲಿ ಮಾರ್ಪಾಡು ಆಗಿರುವ ಕಾರಣ, ವರ್ಗಾವಣೆ ತಂತ್ರಾಂಶದಲ್ಲಿ ಸದರಿ ಮಾಹಿತಿಯನ್ನು ದಿನಾಂಕ: 30/06/2021ರಲ್ಲಿದ್ದಂತೆ ಪರಿಶೀಲಿಸಿ, ಇಂದೀಕರಿಸಲು ವರ್ಗಾವಣೆ ತಂತ್ರಾಂಶದಲ್ಲಿ ಉಪನಿರ್ದೇಶಕರು, ಪ್ರಾಂಶುಪಾಲರು ಹಾಗೂ ಕಛೇರಿ ಮುಖ್ಯಸ್ಥರುಗಳ Loginಗಳಲ್ಲಿ ದಿನಾಂಕ:07/07/2021 ರವರೆಗೆ ಅವಕಾಶ ನೀಡಲಾಗಿತ್ತು. ಆದಾಗ್ಯೂ ಹಲವಾರು ಶಿಕ್ಷಕರ ವಿವರಗಳನ್ನು ಇಂದೀಕರಿಸುವ ಸಲುವಾಗಿ ದಿನಾಂಕ:07/07/2021 & 08/07/2021 ರಂದು ಈ ಕಛೇರಿಗೆ ತಮ್ಮ ಕಛೇರಿಯಿಂದ ಸಿಬ್ಬಂದಿಯವರನ್ನು ಕೇಂದ್ರ ಕಛೇರಿಗೆ ಕರೆಯಿಸಿ ಇಂದೀಕರಣ ಮಾಡಿಸಲಾಗಿದೆ.

ದಿನಾಂಕ: 08/07/2021 ರಂದು ಸಂಜೆ 5 ಗಂಟೆಗೆ ಇಇಡಿಎಸ್ ತಂತ್ರಾಂಶವನ್ನು ಸ್ಥಗಿತಗೊಳಿಸಲಾಗುವುದು. ಸ್ಥಗಿತಗೊಳಿಸಿದ ನಂತರ ಹುದ್ದೆಗಳ ಮ್ಯಾಪಿಂಗ್ ಪ್ರಕ್ರಿಯೆಯನ್ನು ಶಿಕ್ಷಕರ ವರ್ಗವಣಾ ತಂತ್ರಾಂಶ **(http://sts.karnataka.gov.in/TEACHERTRANSFER2020**) ದಲ್ಲಿ ದಿನಾಂಕ: 11/07/2021 ರ ಸಂಜೆ 5.30 ರೊಳಗೆ ಕಡ್ಡಾಯವಾಗಿ ಪೂರ್ಣಗೊಳಿಸಲು ಅವಕಾಶ ಕಲ್ಪಿಸಿದೆ. ಈ ಬಗ್ಗೆ ಯಾವುದೇ ಚರ್ಚೆಗೆ ಅವಕಾಶವಿರುವುದಿಲ್ಲ.

## Post Verification ತಂತ್ರಾಂಶದಲ್ಲಿ ಇಂದೀಕರಿಸಬೇಕಾದ ವಿವರಗಳು

| ಕ್ರ. ಸಂ | ವಿವರಗಳು | ಇಂದೀಕರಿಸುವ ಲಾಗಿನ್ |
|---|---|---|
| 1 | ಪ್ರಾಥಮಿಕ/ ಪ್ರೌಢಶಾಲಾ ಶಿಕ್ಷಕರು | ಉಪನಿರ್ದೇಶಕರು (ಆಡಳಿತ) ಲಾಗಿನ್ |
| 2 | ನಿರ್ದಿಷ್ಟ ಹುದ್ದೆಗಳ ಮಾಹಿತಿ ( ಬಿ.ಆರ್.ಸಿ, ಇ.ಸಿ.ಒ, ಬಿ.ಆರ್.ಪಿ, ಸಿ.ಆರ್.ಪಿ. ಐ. ಇ ಆರ್.ಟಿ..ಇತ್ಯಾದಿ) | ಕ್ಷೇತ್ರಶಿಕ್ಷಣಾಧಿಕಾರಿಗಳ ಲಾಗಿನ್ |
| 3 | ಉಪನ್ಯಾಸಕರು ಮತ್ತು ತಾಂತ್ರಿಕ ಸಹಾಯಕ ಹುದ್ದೆ | ಪ್ರಾಂಶುಪಾಲರು ಡಯಟ್ ಲಾಗಿನ್ |
| 4 | ರಾಜ್ಯ ಮಟ್ಟದ ಇತರೆ ಕಛೇರಿಗಳು | ಆಯಾ ಕಛೇರಿಯ ಮುಖ್ಯಸ್ಥರ ಲಾಗಿನ್ |

ದಿ: 8/7/2021ರಂದು ತಮ್ಮ ಲಾಗಿನ್ ನಲ್ಲಿ ನೀಡಲಾಗಿರುವ ಕ್ರೊಢೀಕೃತ ಹುದ್ದೆಗಳ ಮಾಹಿತಿ **( consolidated report)** ನ್ನು ಡೌನ್ ಲೋಡ್ ಮಾಡಿ ಪರಿಶೀಲಿಸಿ ದೃಢೀಕರಿಸಿದ ಪ್ರತಿಯನ್ನು ಅದೇ ಲಾಗಿನ್ ನಲ್ಲಿ ತಪ್ಪದೆ ಅಪ್ ಲೋಡ್ ಮಾಡುವುದು.

ಒಂದು ವೇಳೆ ಮಾಹಿತಿಯನ್ನು ನಿಯಮಾನುಸಾರ ಇಂದೀಕರಿಸದ ಕಾರಣ ವರ್ಗಾವಣೆ ಪ್ರಕ್ರಿಯೆಯಲ್ಲಿ ತೊಂದರೆಗಳಾದಲ್ಲಿ ಸಂಬಂಧಪಟ್ಟ ಅಧಿಕಾರಿಗಳೇ ನೇರ ಹೊಣೆಯಾಗುತ್ತಾರೆಂದು ತಿಳಿಸಿದೆ ಹಾಗೂ ದಿನಾಂಕ: 11/07/2021 ರ ನಂತರ ನ್ಯೂನತೆಗಳು ಕಂಡುಬಂದಲ್ಲಿ ಯಾವುದೇ ತಿದ್ದುಪಡಿಗೆ ಅವಕಾಶ ಇರುವುದಿಲ್ಲ. ಸಮಯಾವಕಾಶ ಕಡಿಮೆ ಇದ್ದು, ಕೊನೆ ದಿನಾಂಕದವರೆಗೆ ಕಾಯದೆ ಆದ್ಯತೆ ಮೇಲೆ ಸದರಿ ಕೆಲಸವನ್ನು ಪೂರ್ಣಗೊಳಿಸಲು ಮತ್ತೊಮ್ಮೆ ಸೂಚಿಸಿದೆ.

ನಿರ್ದೇಶಕರು
ಇತರ ಪರೀಕ್ಷೆಗಳು ಹಾಗೂ
ವರ್ಗಾವಣಾ ಪ್ರಕ್ರಿಯೆ ನಿಯಂತ್ರಣಾಧಿಕಾರಿ

ಪ್ರತಿಯನ್ನು,

1) ಅಪರ ಆಯುಕ್ತರು, ಧಾರವಾಡ ಮತು ಕಲ್ಬುರ್ಗಿ ಇವರಿಗೆ ಮಾಹಿತಿಗಾಗಿ
2) ನಿರ್ದೇಶಕರು (ಪ್ರಾಥಮಿಕ ಶಿಕ್ಷಣ, ಆಯುಕ್ತರ ಕಛೇರಿ , ಬೆಂಗಳೂರು, ಇವರಿಗೆ ಮಾಹಿತಿಗಾಗಿ
3) ವಿಭಾಗಿಯ ಸಹ ನಿರ್ದೇಶಕರು,ಬೆಂಗಳೂರು, ಮೈಸೂರು,ಬೆಳಗಾವಿ,ಕಲ್ಬುರ್ಗಿ ಇವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
4) ಎಲ್ಲಾ ಉಪನಿರ್ದೇಶಕರು (ಆಡಳಿತ) ಸಾ. ಶಿ. ಇ. ಇವರಿಗೆ ಸೂಕ್ತ ಕ್ರಮಕ್ಕಾಗಿ
5) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಾ. ಶಿ. ಇ. ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
6) ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರಿಗೆ , ಸಂಬಂಧಿಸಿದ ಬಿ.ಇ.ಒ. ಮುಖಾಂತರ
7) ಕಛೇರಿ ಪ್ರತಿ